ತಾರೀಖು 23ನೆ ಜನವರಿ 1907.

ನಂ. 6550—ಸ್ಯಾನಿಟರಿ 66-06—25, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ್ತು ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384 ಮಿಸಲೇನಿಯಸ್ ಫೈಲ್ 21—96. ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗುತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು
1. ಕೋಡಿಗರಹಳ್ಳಿ	ಆಲೂರು ಸಬ್ ತಾಲ್ಲೂಕು.
2. ಪಾಳ್ಯಪಟ್ಟ	ಡಿಟೋ

ತಾರೀಖು 23ನೆ ಜನವರಿ 1907.

ನಂ. 6558—ಸ್ಯಾ. 156-06-5, ಕೋಲಾರ್ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು ಇಂದ	ತಾರೀಖು ಗೆ
1. ದನಗಳ ಜಾತ್ರೆ ...	ಪೊಕ್ಕಲೇರಿ ...	ಕೋಲಾರ ...	25—1—07	6—2—07
			ಯೆರಡು ದಿವಸಗಳೂ ಸಹ	
2. ಶ್ರೀ ಭೋಗ ನಂದೀಶ್ವರ ಸ್ವಾಮಿ ರಥೋತ್ಸವ.	ನಂದಿ ...	ಚಿಕ್ಕಬಳ್ಳಾಪುರ ...	11—2—07	22—2—07
			ಯೆರಡು ದಿವಸಗಳೂ ಸಹ	
3. ಶ್ರೀ ವೆಂಕಟರಮಣ ಸ್ವಾಮಿ ರಥೋತ್ಸವ.	ಗುಟ್ಟಹಳ್ಳಿ ...	ಬವರಿಂಗಪೇಟೆ ...	27—1—07	1—2—07
			ಯೆರಡು ದಿವಸಗಳೂ ಸಹ	

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 24ನೆ ಜನವರಿ 1907.

ನಂ. 6589—ಸ್ಯಾನಿಟರಿ 57-06—6, ಚಿತ್ರದುರ್ಗ ಡಿಸ್ಟ್ರಿಕ್ಟ್ ಹಿರಿಯೂರು ತಾಲ್ಲೂಕಿನ ಹಿರಿಯೂರಿಗೆ ತೈರಾಮಕೇಶ್ವರಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು, 1907ನೆಯ ವರ್ಷದ ಫಿಬ್ರವರಿ 1ನೆ ತಾರೀಖಿನಿಂದ ಫಿಬ್ರವರಿ 15ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 28ನೆ ಜನವರಿ 1907.

ನಂ. 6699—ಸ್ಯಾನಿಟರಿ 66-06—28, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್, ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್‌ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವುದು.

ಸ್ಥಳ.	ತಾಲ್ಲೂಕು.
ಯಲ್ಲೆಸಪುರ	ಹೊಳೆನರಸೀಪುರ.